**O.S.No.05/2015 PW.1**

ದಿಃ **17-08-2022** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ</u>

ಅಂಗಡಿ ಕೆಂಚಪ್ಪ ಮತ್ತು ಪಕ್ಕೀರವ್ವ ಇವರ ಬಗ್ಗೆ ನನಗೆ ತಿಳಿದಿರುವುದಿಲ್ಲ. ಅಂಗಡಿ ಗುಡ್ಡಪ್ಪ, ನಿಂಗಪ್ಪ ಮತ್ತು ಬರಮವ್ವ ಇವರ ಬಗ್ಗೆ ನನಗೆ ಪರಿಚಯ ಇರುತ್ತದೆ. ಗುಡ್ಡಪ್ಪ ಮತ್ತು ನಿಂಗಪ್ಪ ಅವರನ್ನು ನಾನು ಚಿಕ್ಕವರಿದ್ದಾಗ ನೋಡಿರುತ್ತೇನೆ. ಸದರಿಯವರು ತೀರಿಕೊಂಡು ಸುಮಾರು ವರ್ಷಗಳಾಗಿರುತ್ತದೆ, ನನಗೆ ಅದರ ಬಗ್ಗೆ ನಿಖರವಾಗಿ ಗೊತ್ತಿಲ್ಲ. ಅವರು ತೀರಿಕೊಂಡಾಗ ನನಗೆ ಸುಮಾರು **22** ವರ್ಷ ವಯಸ್ಸು ಇರಬಹುದು. ಬರಮವ್ವ ಇವರು ಮೊದಲು ತೀರಿಕೊಂಡಿರುತ್ತಾರೆ. ಬರಮವ್ವ ಎಲ್ಲರಕ್ಕಿಂತ ಹಿರಿಯವಳು.

**02.** ಈಗ ನನಗೆ **45** ವರ್ಷ ವಯಸ್ಸು. ನನ್ನ ತಾಯಿ ಸಾವಿತ್ರವ್ವ ಅಂಗಡಿ ನಿಂಗಪ್ಪ ಇವರ ಮಗಳು. ನನ್ನ ತಾಯಿ ಸಾವಿತ್ರವ್ವ **8** ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿಯ ತಂದೆ ನಿಂಗಪ್ಪ ಸುಮಾರು **20** ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿಯ ತಾಯಿಯಾದ ಸೀತಮ್ಮ ಈಕೆಯ ಊರು ಉಳವತ್ತಿ. ನನ್ನ ತಾಯಿಯ ತಂದೆ ನಿಂಗಪ್ಪ ಇತನು ಉಳವತ್ತಿ ಗ್ರಾಮಕ್ಕೆ ದತ್ತು ಹೋಗಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ ನನ್ನ ತಾಯಿ ಒಬ್ಬಳೇ ಹೆಣ್ಣುಮಗಳು ಮತ್ತು **04** ಜನ ಸಹೋದರರು, ಅವರು ಮಲ್ಲಪ್ಪ ಗಂಗಪ್ಪ, ಮೈಲಾರಪ್ಪ ಮತ್ತು ಹನುಮಪ್ಪ. ನನ್ನ ತಾಯಿಗೆ ನಾನು ಒಬ್ಬಳೇ ಮಗಳು. ನನ್ನನ್ನು ಉಳವತ್ತಿ ಗ್ರಾಮದಲ್ಲಿ ಇರುವಂತಹ ನನ್ನ ಮಾವನಾದ ಮಲ್ಲಪ್ಪ ಇತನಿಗೆ ಮದುವೆ ಮಾಡಿಕೊಟ್ಟಿರುತ್ತಾರೆ.

**03.** ನಾನು ಮೊದಲಿನಿಂದಲೂ ಇಲ್ಲಿಯವರೆಗೂ ಉಳುವತ್ತಿ ಗ್ರಾಮದಲ್ಲೇ ವಾಸವಿದ್ದೇನೆ ಎಂದರೆ ಬರಮವ್ವ ಈಕೆಗೆ ಮಕ್ಕಳು ಇರದ ಕಾರಣ ನನ್ನನ್ನು ಚಿಕ್ಕವಳಿದ್ದಾಗಲೇ ಕರೆದುಕೊಂಡು ಬಂದಿರುತ್ತಾರೆ. ನಾನು ಪಶ್ಚಿಮ ಕಾಲುವೆಯಲ್ಲಿ ವಾಸವಿದ್ದದ್ದಕ್ಕಾಗಿ ಎಲ್ಲಾ ದಾಖಲೆಗಳು ಇರುತ್ತವೆ, ಮುಂದಿನ ದಿನಾಂಕದಲ್ಲಿ ಹಾಜರುಪಡಿಸುತ್ತೇನೆ.

ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

(ಶ್ರೀ.ವೀರೇಶ್ ಕುಮಾರ್.ಸಿ.ಕೆ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.